**PW-1:** ಸಣ್ಣಮ್ಮ

ದಿನಾಂಕಃ **07.07.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರವಾಗಿ ಶ್ರೀಮತಿ ಪಿ.ಟಿ.ಎಂ. ವಕೀಲರಿಂದ**

1. ಪ್ರತಿವಾದಿ ಹೆಂಜಾರಪ್ಪ ರವರು ನನಗೆ 7-8 ವರ್ಷಗಳಿಂದ ಪರಿಚಿತ. ನಾವಿಬ್ಬರೂ ಒಂದೇ ಗ್ರಾಮದವರು. ಪ್ರತಿವಾದಿ ವ್ಯವಸಾಯ ಮಾಡುತ್ತಾರೆ. ನಾವು ಹಣದ ವ್ಯವಹಾರವನ್ನು ಮಾಡುವುದಿಲ್ಲ. ಬೇಕಾದಾಗ 500, 1000 ಮತ್ತು 2000 ಕೊಡುತ್ತಿದ್ದೇವು. ಅವರು ವಾಪಸ್ಸು ನೀಡುತ್ತಿದ್ದರು. ದಿನಾಂಕಃ 15.08.2022 ರಂದು ಪ್ರತಿವಾದಿ ನನ್ನಿಂದ ಸಾಲ ಕೇಳಿರುತ್ತಾರೆ. ಪಂಪ್ ಸೆಟ್ ರೀಪೇರಿ ಮಾಡಿಸಲು ನನ್ನಿಂದ ಸಾಲ ಕೇಳಿರುತ್ತಾರೆ. ನಾನು ಸಾಲ ನೀಡಿದಾಗ ಕನಕಪ್ಪ ಬಿನ್ ನರಸಿಂಹಪ್ಪ, ಕನಕಪ್ಪ ಮತ್ತು ನರಸಿಂಹಪ್ಪ ರವರು ಇದ್ದರು. ಹೆಂಜಾರಪ್ಪ ರವರೇ ಸಾಕ್ಷಿದಾರರನ್ನು ಕರೆದುಕೊಂಡು ಬಂದಿದ್ದರು. ಸಾಕ್ಷಿದಾರರ ಕನಕಪ್ಪ ನನ್ನ ಅಳಿಯ ಎಂದರೆ ಸರಿ. ಅವರ ಮೂಲಕವೇ ನಾನು ಸಾಲ ನೀಡಿದ್ದೇನೆ. ಕನಕಪ್ಪ ರವರ ತಂದೆ ನರಸಿಂಹಪ್ಪ ರವರು ನನ್ನ ಸ್ವಂತ ಅಣ್ಣ ಎಂದರೆ ಸರಿ. ಸಾಕ್ಷಿದಾರರು ಬಿ. ದೊಡ್ಡಹಟ್ಟಿ ಗ್ರಾಮ ಎಂದರೆ ಸರಿ. ಪ್ರತಿವಾದಿ ನನ್ನಿಂದ ಯಾವುದೇ ಸಾಲ ಪಡೆಯದೇ ಇದ್ದರೂ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. ನನಗೆ ಯಾವುದೇ ಆನ್ ಡಿಮ್ಯಾಂಡ್ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ಆನ್ ಡಿಮ್ಯಾಂಡ್ ಪ್ರನೋಟ್ ಅನ್ನು ದವಡಬೆಟ್ಟದ ಕನಕಪ್ಪ ರವರು ಬರೆದಿರುತ್ತಾರೆ. ದಿನಾಂಕಃ 15.08.2021 ರಂದು ನಾವು ಪ್ರತಿವಾದಿಗೆ ನೀಡಿದ್ದು ಅವರು ಬರೆದುಕೊಟ್ಟಿರುತ್ತಾರೆ. ನಿಪಿ.1 ರ ಆನ್ ಡಿಮ್ಯಾಂಡ್ ನಲ್ಲಿ ದಿನಾಂಕಃ 15.09.2022 ಮತ್ತು ಹಣ ಸಂದಾಯ ರಶೀದಿಯಲ್ಲಿ ದಿನಾಂಕಃ 15.08.2022 ಎಂದು ನಮೂದಾಗಿದೆ ಎಂದರೆ ಸಾಕ್ಷಿಯು ಅವರು ಬರೆದುಕೊಟ್ಟಂತೆ ಪಡೆದಿದ್ದೇನೆ ಎಂದು ಉತ್ತರಿಸುತ್ತಾರೆ. ಕನಕಪ್ಪ ರವರು ನಮ್ಮ ಎದುರಿಗೆ ಆನ್ ಡಿಮ್ಯಾಂಡ್

ಬರೆದಿರುತ್ತಾರೆ. ಕನಕಪ್ಪ ರವರು ಹಣ ಸಂದಾಯ ರಶೀದಿಯಲ್ಲಿ ದಿನಾಂಕಃ 15.09.2022 ಎಂದು ದಿನಾಂಕ ಬರೆದಿದ್ದಾರೆ ಎಂದರೆ ಸಾಕ್ಷಿಯು ಅವರು ಬರೆದುಕೊಟ್ಟಂತೆ ಪಡೆದಿದ್ದೇನೆ ಎಂದು ಉತ್ತರಿಸುತ್ತಾರೆ. ಹಣ ಕೊಟ್ಟ ದಿನಾಂಕದಿಂದ ದಾವೆ ಸಲ್ಲಿಸುವವರೆಗೂ ಸುಮಾರು ಬಾರಿ ಪ್ರತಿವಾದಿಯನ್ನು ಹಣ ನೀಡುವಂತೆ ಕೇಳಿರುತ್ತೇನೆ. ಹಣ ಕೇಳಿದ ಬಗ್ಗೆ ಪಂಚಾಯಿತಿ ಮಾಡಿದ ಬಗ್ಗೆ ದಾವೆಯಲ್ಲಿ ನಾನು ಬರೆಸಿಲ್ಲ. ಆ ರೀತಿ ಯಾವುದೇ ಪಂಚಾಯಿತಿ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ನಮ್ಮ ವಕೀಲರಿಂದ ತಿಳುವಳಿಕೆ ಪತ್ರ ನೀಡಿದ್ದೇನೆ.

3. ದಿನಾಂಕಃ 14.08.2025 ರಂದು ನಾನು ತಿಳುವಳಿಕೆ ಪತ್ರ ನೀಡಿದ್ದೇನೆ. ತಿಳುವಳಿಕೆ ಪತ್ರ ನೀಡಿದ ಬಗ್ಗೆ ದಾಖಲೆಯನ್ನು ಹಾಜರುಪಡಿಸಿದ್ದೇನೆ. ನಾನು ಹಾಜರುಪಡಿಸಿರುವ ಅಂಚೆ ಲಕೋಟೆಯ ಮೇಲೆ ಯಾವುದೇ ತರಹದ ಹಿಂಬರಹ ಬರೆದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯ ಮನೆಯ ಬಳಿ ಅಂಚೆ ಇಲಾಖೆಯವರು ಹೋಗಿದ್ದ ಬಗ್ಗೆ ನಮೂದು ಮಾಡಿಲ್ಲ ಎಂಬ ಬಗ್ಗೆ ಗೊತ್ತಿಲ್ಲ. ನಾನು, ಕನಕಪ್ಪ ಮತ್ತು ಸಾಕ್ಷಿದಾರರು ಸೇರಿ ನಿಪಿ.1 ಮತ್ತು ಎಲ್ಲಾ ದಾಖಲೆಗಳನ್ನು ಸೃಷ್ಟಿ ಮಾಡಿ ಈ ದಾವೆಯನ್ನು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ದಿನಾಂಕಃ 13.08.2025 ರಂದು ನೀಡಿರುವ ತಿಳುವಳಿಕೆ ಪತ್ರ ಪ್ರತಿವಾದಿಗೆ ಜಾರಿಯಾಗಿಲ್ಲ ಎಂದರೆ ಸರಿಯಲ್ಲ. ನನಗೆ ಮತ್ತು ಪ್ರತಿವಾದಿಗೆ ಯಾವುದೇ ರೀತಿಯ ಹಣದ ವ್ಯವಹಾರ ನಡೆದಿಲ್ಲ ಮತ್ತು ಆತ ಆರ್ಥಿಕವಾಗಿ ಸಮರ್ಥನಿದ್ದು ನನ್ನಿಂದ ಸಾಲ ಪಡೆಯುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗೆ ನೀಡಿರುವ ನೋಟಿಸ್ ಎಂದೂ ಜಾರಿಯಾಗಿಲ್ಲ ಎಂದರೆ ಸರಿಯಲ್ಲ. ದಿನಾಂಕಃ 13.08.2025 ರಂದು ನೋಟಿಸ್ ನೀಡಿ ದಿನಾಂಕಃ 14.08.2025 ರಂದು ಈ ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿ ಮತ್ತು ನನ್ನ ನಡುವೆ ಯಾವುದೇ ಹಣಕಾಸಿನ ವ್ಯವಹಾರ ಇಲ್ಲದೇ ಇದ್ದರೂ ಆತನ ಮೇಲಿನ ವೈಷಮ್ಯದಿಂದ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

**(ನನ್ನ ಉಕ್ತಲೇಖನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ ಇದೆ.

Sd/-

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.

ಪಾವಗಡ.